ಶ್ರೀ ಭಗವಾನ್ ಮಹಾವೀರ್ ಜೈನ್ ಸ್ವತಂತ್ರ ಪದವಿಪೂರ್ವ ಕಾಲೇಜು

**Mock Paper** ಜನವರಿ – 2016

**ಪ್ರಥಮ ಪಿ.ಯು.ಸಿ : ಕನ್ನಡ (01)**

**ಸಮಯ : 3 ಗಂಟೆ 15 ನಿಮಿಷ** **ಒಟ್ಟು ಅಂಕಗಳು : 100**

ಅ–ವಿಭಾಗ

**I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 10 × 1 = 10**

1 ಅಂಗಾಧಿಪತಿ ಯಾರು?

2 ಕಪ್ಪೆಗಳು ಎಲ್ಲಿ ಹುಟ್ಟಿ ಕೂಗುತ್ತವೆಂದು ಕನಕದಾಸರು ಹೇಳುತ್ತಾರೆ?

3 ಕ್ಷಾತ್ರವಧೆ ಮಾಡಿದವನು ಯಾರು?

4 ಅಮ್ಮಿ ಯಾವಾಗಲೂ ಏನನ್ನು ಧರಿಸುವಳು?

5 ಶಾಸ್ತ್ರೀ ಮಾಸ್ತರರ ಹೆಂಡತಿಯ ಹೆಸರೇನು?

6 ಯಾರ ಶ್ರೇಯಸ್ಸಿಗಾಗಿ ಶಕುಂತಲೆ ಅರಮನೆಗೆ ಬಂದಿದ್ದಾಳೆ?

7 ಹುಲಿ ಕನ್ನಡಿಯಲ್ಲಿ ಕಂಡಿದ್ದೇನು?

8 ಪಿಶಾಚಿಗಳು ಮನುಷ್ಯನನ್ನು ಯಾವುದರ ಮೂಲಕ ಪ್ರವೇಶಿಸುತ್ತವೆ?

9 ರಾಜಕುಮಾರಿಗೆ ಬಂದ ರೋಗ ಯಾವುದು?

10 ಕತ್ತಲೆಯ ನಿಜ ಜನಕ ಯಾರು?

ಆ–ವಿಭಾಗ

**II. (ಅ) ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 4 × 2 = 8**

11. ಶಿವಲಿಂಗವನ್ನು ಯಾವ ಯಾವ ಹೂಗಳಿಂದ ಚೆನ್ನಯ್ಯನು ಸಿಂಗರಿಸಿದನು?

12. ಮಾದೇವ ತನ್ನ ಶಿಶು ಮಕ್ಕಳಿಗೆ ಏನೇನು ನೀಡಿದನು?

13. ಮಗುವಿನಲ್ಲಿ ಗಮನಿಸಬೇಕಾದ ಗುಣಗಳು ಯಾವುವು?

14. ಭ್ರೂಣಾವಸ್ಥೆಯ ಮಗು ಏಕೆ ಗಾಬರಿಗೊಂಡಿದೆ?

15. ನಗುವ ಚಂದಿರ ಏಕೆ ಕೈ ಗಂಟಿಕೊಳ್ಳುತ್ತಿದ್ದಾನೆ.

**(ಆ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 3 × 2 = 6**

16. ಜ್ಯೋತಿಷ್ಯದ ಪ್ರಕಾರ ಗ್ರಹಗಳೆಷ್ಟು? ಅವು ಯಾವುವು?

17. ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?

18. ರೈತ ಚಳುವಳಿಗಳು ಎಲ್ಲೆಲ್ಲಿ ನಡೆದವು?

19. ಕಾಡಿನಲ್ಲಿ ಹುಲಿಗಳೆಲ್ಲಾ ದಿಕ್ಕಾಪಾಲಾಗಿ ಏಕೆ ಓಡಿದವು?

**(ಇ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :** 3 × 2 = 6

20. ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದನು?

21. ಕೋಡಂಗಿಯ ತಾನು ಬೆಳಿಗ್ಗೆಯಿಂದ ಏನೇನು ಮಾಡಿದೆನೆಂದು ಹೇಳುತ್ತಾನೆ?

22. ಬೋಳೇಶಂಕರನು ಹುಡುಗಿಯರಿಗೆ ಚಿನ್ನ ಕೊಟ್ಟಿದ್ದಕ್ಕೆ ಸಾವ್ಕಾರಣ್ಣನು ಏನು ಹೇಳುತ್ತಾನೆ?

23. ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ.

ಇ–ವಿಭಾಗ

**III.(ಅ) ಕೆಳಗಿನ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ : 2 × 3 = 6**

24. ಜನನೀಸ್ತನ್ಯಮನುಂಡೆನಾಂ ಬಳಕೆ ನೀಂ

25. ಹಲುಬಿದಳ್ ಕಲ್ಮರಂ ಕರಗುವಂತೆ

26. ಸತ್ತವರ ಎಲ್ಲ ಸತ್ತೆ ಹೊರಬೀಳುತ್ತದೆ.

**(ಆ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ : 1 × 3 = 3**

27. ಮನುಷ್ಯ ಸಾಯ್ದೆ ಕಲ್ಲು ಸತ್ತಾದ ಸುಮ್ಕಿರು ಮತ್ತೆ

28. ರಸ್ತೆಯಿಂದ ಏಳುವ ದೂಳು ನನ್ನ ತಲೆಗೆ ತಾಗಬೇಕು.

**(ಇ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ : 1 × 3 = 3**

29. ಜನ ಎಲ್ಲಿ ಸೇರಿದರೆ ಅಲ್ಲೇ ದರ್ಬಾರು

30. ತಲೆಯಿಂದ ಕೆಲಸ ಮಾಡುವುದು ಹೇಗೆಂದು ನಿಮಗೆ ಹೇಳಿಕೊಡುತ್ತೇನೆ.

## ಈ–ವಿಭಾಗ

**IV. (ಅ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. $3 \times 4 = 12$**

31. 'ಕರುಣಾಳು ರಾಘವನಲ್ಲಿ ತಪ್ಪಿಲ್ಲ' ಎಂಬ ಸೀತೆಯ ನಿಲುವನ್ನು ವಿಶ್ಲೇಷಿಸಿ.
32. ಅಮ್ಮಿಯ ವ್ಯಕ್ತಿತ್ವ ಕವಿತೆಯಲ್ಲಿ ಮೂಡಿದ ಬಗೆಯನ್ನು ವಿವರಿಸಿ.
33. 'ದೇವರಿಗೊಂದು ಅರ್ಜಿ' ಕವಿತೆಯ ಆಶಯವನ್ನು ವಿವರಿಸಿ.
34. ಉಳ್ಳವರ ಸ್ವಾರ್ಥ ಭೂಮಿ ಮತ್ತು ಇಂಧನವನ್ನು ಹೇಗೆ ನಾಶಗೈದಿವೆ ವಿವರಿಸಿ.

**(ಆ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. $2 \times 4 = 8$**

35. ರಂಗರಾವ್ ಅವರ ಸಾಮಾಜಿಕ ಸುಧಾರಣೆಯ ಕೊಡುಗೆಗಳೇನು?
36. ನಿರಾಕರಣೆ ಕಥೆಯಲ್ಲಿ ಬರುವ ಶಕುಂತಲೆ ವ್ಯಕ್ತಿತ್ವವನ್ನು ವಿವರಿಸಿ.
37. ನಮ್ಮ ಆರೋಗ್ಯದ ಮೇಲೆ ವಿದೇಶಿ ಹೋಟೇಲ್‌ಗಳು ನಡೆಸಿದ ದಾಳಿಗಳೇನು?

**(ಇ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. $2 \times 4 = 8$**

38. ಸೈನಿಕರು ಏನೇನನನ್ನು ನಾಶ ಮಾಡಿದರು ಎಂದು ಶಿವಪುರದ ಜನರು ಹೇಳುತ್ತಾರೆ?
39. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ.
40. ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?

## ಉ–ವಿಭಾಗ

**V. (ಅ) ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ : $1 \times 5 = 5$**

41. ಅನೃತಂ ಲೋಭಂ ಭಯಮೆಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮಣ್ಮಿಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್

ಅಥವಾ

42. ಅಖಂಡ ಕರ್ಣಾಟಕ
ಅಲ್ತೋ ನಮ್ಮ ಬೂಟಾಟದ ರಾಜಕೀಯ ನಾಟಕ
ಇಂದು ಬಂದು ನಾಳೆ ಸಂದು
ಹೋದ ಸಚಿವ ಮಂಡಲ
ರಚಿಸುವೊಂದು ಕೃತಕವಲ್ತೊ
ಸಿರಿಗನ್ನಡ ಸರಸ್ವತಿಯ
ವಜ್ರಕರ್ಣ ಕುಂಡಲ !

**(ಆ) ಭಾಷಾಭ್ಯಾಸ :**

**ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಸೂಚನೆಗೆ ಅನುಗುಣವಾಗಿ ಉತ್ತರವನ್ನು ಬರೆಯಿರಿ : $6 \times 2 = 12$**

43. **ಪದಗಳ ಅರ್ಥ ಬರೆಯಿರಿ :** 1. ಕೈಪಿಡಿ 2. ದ್ರವ್ಯ
44. **ಬಿಡಿಸಿ ಬರೆಯಿರಿ :** 1. ಅಪವಾದಮಾದರಿಸ 2. ಒಂದ್ಯೆದು
45. **ತತ್ಸಮ – ತದ್ಭವ ರೂಪ ಬರೆಯಿರಿ :** 1. ನಕ್ಷೆ 2. ಬ್ರಹ್ಮ
46. **ಸಮಾನಾರ್ಥ ಬರೆಯಿರಿ :** 1. ಅನ್ನ, 2. ಅಹಿ
47. **ನಾನಾರ್ಥ ಬರೆಯಿರಿ :** 1. ಕಾಲು, 2. ಪಕ್ಷ
48. **ಸ್ವಂತ ವಾಕ್ಯದಲ್ಲಿ ಬಳಸಿರಿ :** 1. ಬೈಗುಬೆಳಗು, 2. ಸೀಕುಬಾಕು
49. **2 ದ್ವಿರುಕ್ತಿ ಪದಗಳನ್ನು ಬರೆಯಿರಿ.**

**(ಇ) ಕೆಳಗಿನ ಯಾವುದಾದರೂ ಒಂದು ವಿಷಯ ಕುರಿತು ಪ್ರಬಂಧವನ್ನು ಬರೆಯಿರಿ : $1 \times 5 = 5$**

50. ಅತಿವೃಷ್ಟಿ ಅನಾವೃಷ್ಟಿ
51. ಪುಸ್ತಕಗಳ ಮಹತ್ವ

**(ಈ) ಪತ್ರಲೇಖನ :**

**ಈ ಕೆಳಗಿನ ಯಾವುದಾದರೂ ಒಂದಕ್ಕೆ ಪತ್ರ ಬರೆಯಿರಿ : $1 \times 4 = 4$**

52. ಪುಸ್ತಕ ಖರೀದಿಗಾಗಿ ಹಣ ಕಳುಹಿಸುವಂತೆ ಕೋರಿ ತಂದೆಯವರಿಗೆ ಪತ್ರ ಬರೆಯಿರಿ.
53. ನಿಮ್ಮ ಊರಿಗೆ ಗ್ರಂಥಾಲಯ ಸೌಲಭ್ಯ ಮಂಜೂರು ಮಾಡುವಂತೆ ಕೋರಿ ಜಿಲ್ಲಾಧಿಕಾರಿಗೆ ಪತ್ರ ಬರೆಯಿರಿ.

**(ಉ) ಈ ಕೆಳಗಿನ ಯಾವುದಾದರೂ ಒಂದಕ್ಕೆ ಗಾದೆಯನ್ನು ವಿಸ್ತರಿಸಿ ಬರೆಯಿರಿ : $1 \times 4 = 4$**

54. ತಾಳಿದವನು ಬಾಳಿಯಾನು
55. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೆ?

*****